ನೀರು ಪೂರೈಸುವುದು

241(2712); ಶ್ರೀ ಶಿವಣ್ಣ ಬಿ. (ಆನೇಕಲ್)

ಅ) ಆನೇಕಲ್ ಪಟ್ಟಣದ ಸೂರ್ಯನಗರಕ್ಕೆ ಕುಡಿಯುವ ನೀರು ಪೂರೈಕೆಯ ಯೋಜನೆ ಯಾವ ಹಂತದಲ್ಲಿದೆ (ಮಾಹಿತಿ ನೀಡುವುದು);

ಆ) ಸೂರ್ಯನಗರಕ್ಕೆ ನೀರು ಪೂರೈಕೆಯ ಯೋಜನೆಯನ್ನು ಎಷ್ಟು ಕಾಲಮಿತಿಯಲ್ಲಿ ಪೂರ್ಣಗೊಳಿಸುವ ಯೋಜನೆ ಸರ್ಕಾರಕ್ಕೆ ಇದೆ (ಮಾಹಿತಿ ನೀಡುವುದು);

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಯವರು)

ಅ) ಸೂರ್ಯನಗರದ ವಸತಿ ಸಮುಚ್ಛಯ 1, 2, 3 ಮತ್ತು 4ನೇ ಹಂತದ ಪ್ರದೇಶಗಳಿಗೆ, ಆನೇಕಲ್ ಪಟ್ಟಣ ಮತ್ತು 17 ಹಳ್ಳಿಗಳಿಗೆ ನೀರು ಸರಬರಾಜು ಮಾಡುವ ಸಲುವಾಗಿ ₹ 168.00 ಕೋಟಿಗಳ ಒಂದು ಸಮಗ್ರ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ. ಈ ಸ್ಥಳಗಳಿಗೆ ಒಟ್ಟು ದಿನಂಪ್ರತಿ 30 ದಶಲಕ್ಷ ಲೀಟರ್ ನೀರಿನ ಅವಶ್ಯಕತೆ ಇರುತ್ತದೆ. ಮೇಲ್ಕಂಡ ಪ್ರದೇಶಗಳಿಗೆ ನೀರು ಸರಬರಾಜು ಮಾಡುವ ಪ್ರಮಾಣ ಮತ್ತು ಆಂದಾಜು ಪಟ್ಟಿಯ ವಿವರ ಈ ಕೆಳಕಂಡಂತಿವೆ:

- ಸೂರ್ಯನಗರ ವಸತಿ ಸಮುಚ್ಛಯ 1, 2, 3 ಮತ್ತು 4ನೇ ಹಂತ (ಕರ್ನಾಟಕ ಗೃಹ ಮಂಡಳಿ) – ₹ 84 ಕೋಟಿಗಳು (ದಿನಂಪ್ರತಿ 15 ದಶಲಕ್ಷ ಲೀಟರ್)
- ಆನೇಕಲ್ ಪಟ್ಟಣ (ಕರ್ನಾಟಕ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ) – ₹ 42 ಕೋಟಿಗಳು (ದಿನಂಪ್ರತಿ 7.5 ದಶಲಕ್ಷ ಲೀಟರ್)
- 17 ಹಳ್ಳಿಗಳು (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ) – ₹ 42 ಕೋಟಿಗಳು (ದಿನಂಪ್ರತಿ 7.5 ದಶಲಕ್ಷ ಲೀಟರ್)

ಕರ್ನಾಟಕ ಗೃಹ ಮಂಡಳಿ ಈಗಾಗಲೇ ₹ 32.00 ಕೋಟಿಗಳನ್ನು ಬೆಂಗಳೂರು ಜಲಮಂಡಳಿಗೆ ಭಾಗಶಃ ಠೇವಣಿ ಮಾಡಿರುತ್ತದೆ. ಆನೇಕಲ್ ಪಟ್ಟಣ ಹಾಗೂ 17 ಹಳ್ಳಿಗಳಿಗೆ ನೀರು ಸರಬರಾಜಿಗೆ ಸಂಬಂಧಿಸಿದಂತೆ (ಹಳ್ಳಿಗಳಿಗೆ ನೀರು ಸರಬರಾಜು ಮಾಡಲು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಬೆಂಗಳೂರು ಜಲಮಂಡಳಿಯ ಮುಖ್ಯ ಕೊಳವೆ ಮಾರ್ಗದಿಂದ ಉಪಕೊಳವೆಗಳನ್ನು ಅಳವಡಿಸಬೇಕಾಗುತ್ತದೆ) ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ. ಇದಲ್ಲದೆ, ಕರ್ನಾಟಕ ಗೃಹ ಮಂಡಳಿ, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಮತ್ತು ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗಳು ಅಗತ್ಯವಾದ ಹಣವನ್ನು ಬೆಂಗಳೂರು ಜಲಮಂಡಳಿಗೆ ಸಂದಾಯ ಮಾಡಲು ಸೂಚಿಸಿದೆ.

ಬೆಂಗಳೂರು ಜಲಮಂಡಳಿಯ ನೀರು ಪೂರೈಕೆಯ ಮುಖ್ಯ ಕೊಳವೆಯು ಜಂಬುಸವಾರಿ ಗುಡ್ಡದ ಜಲಾಗಾರದಿಂದ ಜಿಗಣಿ ಗ್ರಾಮದ ಮಾರ್ಗವಾಗಿ ಆನೇಕಲ್ ಪಟ್ಟಣದ ಮೂಲಕ ಸೂರ್ಯನಗರದ ವಸತಿ ಸಮುಚ್ಛಯಕ್ಕೆ ಕೊನೆಗೊಳ್ಳುವುದು. ಹಳ್ಳಿಗಳಿಗೆ ನೀರು ಸರಬರಾಜು ಒದಗಿಸಲು, ಮುಖ್ಯ ಕೊಳವೆಯಿಂದ ಟ್ಯಾಪಿಂಗ್ ಉಪಕೊಳವೆಗಳನ್ನು ಸೇರಿಸಲಾಗುತ್ತದೆ.

ಆನೇಕಲ್ ಪಟ್ಟಣದ ಸೂರ್ಯನಗರಕ್ಕೆ ಕುಡಿಯುವ ನೀರು ಪೂರೈಕೆಯ ಯೋಜನೆಗೆ ದಿನಾಂಕ: 26.02.2014 ರಂದು ಟೆಂಡರ್ ಕರೆದಿದ್ದು, ದಿನಾಂಕ: 28.05.2014 ರಂದು ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕವಾಗಿತ್ತು. ಈ ಕಾಮಗಾರಿಗೆ ಇಬ್ಬರು ಗುತ್ತಿಗೆದಾರರಿಂದ ಟೆಂಡರ್ ಸ್ವೀಕರಿಸಲಾಗಿದ್ದು, ತಾಂತ್ರಿಕ ಮೌಲ್ಯ ಮಾಪನ ಪೂರ್ಣಗೊಂಡಿರುತ್ತದೆ. ಆರ್ಹ ಗುತ್ತಿಗೆದಾರರ ಆರ್ಥಿಕ ಬಿಡ್‌ಗಳನ್ನು ತೆರೆಯಬೇಕಾಗಿದೆ.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ನಿಯಮಾವಳಿ, 1964ರ ಪ್ರಕಾರ ಜಲಮಂಡಳಿಯು ಬೃಹತ್ ಬೆಂಗಳೂರು ಮಹಾನಗರ ಪ್ರದೇಶಕ್ಕೆ ಮಾತ್ರ ನೀರು ಸರಬರಾಜು ಒದಗಿಸಬೇಕಾಗುತ್ತದೆ. ಮೇಲ್ಕಂಡ ಪ್ರದೇಶಗಳು ಬಿ.ಬಿ.ಎಂ.ಪಿ ವ್ಯಾಪ್ತಿಯ ಹೊರಗಿದ್ದು ಆ ಪ್ರದೇಶಗಳಿಗೆ ನೀರು ಸರಬರಾಜು ಮಾಡಲು ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ. ಅನುಮೋದನೆಯ ನಂತರ ಹಾಗೂ ಆನೇಕಲ್ ಪುರಸಭೆ, ಕರ್ನಾಟಕ ಗೃಹ ಮಂಡಳಿ ಮತ್ತು ಗ್ರಾಮೀಣ ಮತ್ತು ಪಂಚಾಯತ್ ರಾಜ್ ಇಲಾಖೆಗಳು ಠೇವಣಿ ಹಣವನ್ನು ಪಾವತಿಸಿದ ನಂತರ ಟೆಂಡರ್ ಪ್ರಕ್ರಿಯೆಯನ್ನು ಮುಂದುವರಿಸಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

ಆ) ಸೂರ್ಯನಗರಕ್ಕೆ ನೀರು ಪೂರೈಕೆಯ ಯೋಜನೆಯನ್ನು ಗುತ್ತಿಗೆ ನೀಡಿದ ದಿನಾಂಕದಿಂದ 18 ತಿಂಗಳುಗಳಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಸರ್ಕಾರದ ಆದಾಯ ಮತ್ತು ವೆಚ್ಚ

242(2476); ಶ್ರೀ ರಾಜೀವ್ ಪಿ. (ಕುಡಚಿ)

ಅ) 2013–14ನೇ ಸಾಲಿನ ಆಯವ್ಯಯದಲ್ಲಿ ಎಲ್ಲಾ ಮೂಲಗಳಿಂದ ಸರ್ಕಾರಕ್ಕೆ ಬಂದ ಆದಾಯ ಎಷ್ಟು (ಮೂಲಗಳ ವಿವರ ನೀಡುವುದು);

ಆ) 2013–14ನೇ ಸಾಲಿನ ಸರ್ಕಾರ ಖರ್ಚು ಮಾಡಿದ ಹಣ ಎಷ್ಟು (ವಿವರ ನೀಡುವುದು);

ಇ) 2013–14ನೇ ಸಾಲಿನ ಆಯವ್ಯಯದಲ್ಲಿ ಮಾರ್ಚ್ (2014) ತಿಂಗಳವರೆಗೆ ಖರ್ಚು ಮಾಡದೆ ಉಳಿದ ಹಣ ಎಷ್ಟು; ಯಾವ ಯಾವ ಇಲಾಖೆಯಲ್ಲಿ ಖರ್ಚು ಮಾಡದೆ ಉಳಿದಿದೆ; ಇದಕ್ಕೆ ಕಾರಣವೇನು;